**All India Radio: Bangalore**
**National Bulletin In Kannada**
**24.03.2026 19.35 hrs**
**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**24.03.2026 19.35 hrs**
*******************

ಮುಖ್ಯಾಂಶಗಳು

೧. ಪಶ್ಚಿಮ ಏಷ್ಯಾ ಉದ್ವಿಗ್ನತೆ ಶಮನಗೊಳಿಸಿ, ಹಾರ್ಮುಜ್ ಜಲಸಂಧಿ ಮುಕ್ತಗೊಳಿಸಲು ಪ್ರಯತ್ನ- ಭಾರತದ ನಿಲುವು ಪ್ರಕಟಿಸಿದ ಪ್ರಧಾನಿ

೨. ಪಶ್ಚಿಮ ಏಷ್ಯಾ ಸಂಘರ್ಷ: ಭಾರತದ ರಕ್ಷಣಾ ಸನ್ನದ್ಧತೆ ಅವಲೋಕಿಸಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್

೩. ಐದು ರೈಲ್ವೇ ಸುಧಾರಣೆಗಳನ್ನು ಘೋಷಿಸಿದ ಕೇಂದ್ರ ರೈಲ್ವೇ ಸಚಿವ ಅಶ್ವಿನಿ ವೈಷ್ಣವ್

೪. ಐಪಿಎಲ್‌ನ ೨೦೨೬ರ ಆವೃತ್ತಿಯಲ್ಲಿ ಬೆಂಗಳೂರು ತಂಡಕ್ಕೆ ಪ್ರಾಯೋಜಕತ್ವ ನೀಡಿದ ಕರ್ನಾಟಕದ ಬ್ರ್ಯಾಂಡ್ ಕೆಎಂಎಫ್

***************

ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ಶಾಂತಿ ಪುನಃಸ್ಥಾಪಿಸಲು ಮಾತುಕತೆ ಮತ್ತು ರಾಜತಾಂತ್ರಿಕತೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಬೆಂಬಲ ನೀಡಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದ ಕುರಿತು ರಾಜ್ಯಸಭೆಯಲ್ಲಿಂದು ಅವರು ಮಾತನಾಡಿದರು. ಭಾರತವು, ಉದ್ವಿಗ್ನತೆಯನ್ನು ಶಮನ ಮಾಡುವ ಮತ್ತು ಹಾರ್ಮುಜ್ ಜಲಸಂಧಿಯನ್ನು ಮತ್ತೆ ಕಾರ್ಯಾರಂಭ ಮಾಡುವ ವಿಷಯದ ಕುರಿತು ಧ್ವನಿ ಎತ್ತಿದೆ ಎಂದು ಅವರು ವಿವರಿಸಿದರು. ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ಪ್ರಾರಂಭವಾದ ನಂತರದಿಂದ, ಗಲ್ಫ್ ರಾಷ್ಟ್ರಗಳ ನಾಯಕರೊಂದಿಗೆ ಹಾಗೂ ಇರಾನ್, ಇಸ್ರೇಲ್ ಮತ್ತು ಅಮೇರಿಕಾದೊಂದಿಗೆ ದೂರವಾಣಿ ಸಂಭಾಷಣೆ ನಡೆಸಿರುವುದಾಗಿ ಪ್ರಧಾನಿ ಹೇಳಿದರು.

ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕ ಈ ಪ್ರದೇಶದಲ್ಲಿ ಶಾಂತಿಯನ್ನು ಪುನಃಸ್ಥಾಪಿಸುವುದು ಭಾರತದ ಉದ್ದೇಶವಾಗಿದೆ. ಹಾರ್ಮುಜ್ ಜಲಸಂಧಿಯಲ್ಲಿ ವಾಣಿಜ್ಯ ಹಡಗುಗಳ ಮೇಲಿನ ದಾಳಿಗಳು ಮತ್ತು ಅಂತಾರಾಷ್ಟ್ರೀಯ ಸಂಚಾರಕ್ಕೆ ಇರುವ ಅಡೆತಡೆಗಳು ಸ್ವೀಕಾರಾರ್ಹವಲ್ಲ ಎಂದು ಪ್ರಧಾನಿ ಅಭಿಪ್ರಾಯ ಪಟ್ಟಿದ್ದಾರೆ.

ಮೂರು ವಾರಗಳಿಗೂ ಹೆಚ್ಚು ಕಾಲ ಮುಂದುವರೆದಿರುವ ಈ ಸಂಘರ್ಷದಿಂದ ಪ್ರಪಂಚದಾದ್ಯಂತ ಗಂಭೀರ ಇಂಧನ ಬಿಕ್ಕಟ್ಟು ಉಂಟಾಗಿದೆ. ಈ ಸಂಘರ್ಷದ ನಡುವೆಯೂ ಸಹ ಭಾರತೀಯ ಹಡಗುಗಳ ಸುರಕ್ಷಿತ ಚಲನೆಯನ್ನು ಖಚಿತಪಡಿಸಿಕೊಳ್ಳಲು, ನಿರಂತರವಾಗಿ ರಾಜತಾಂತ್ರಿಕ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದು ಅವರು ತಿಳಿಸಿದರು.

ಈ ಸಂಘರ್ಷವು ಜಾಗತಿಕ ವ್ಯಾಪಾರ ಮಾರ್ಗಗಳ ಮೇಲೆ ಪರಿಣಾಮ ಬೀರುತ್ತಿದ್ದು, ಭಾರತಕ್ಕೂ ಈ ಪರಿಸ್ಥಿತಿ ಕಳವಳಕಾರಿಯಾಗಿದೆ. ಪೆಟ್ರೋಲ್, ಡೀಸೆಲ್, ಅನಿಲ ಮತ್ತು ರಸಗೊಬ್ಬರಗಳಂತಹ ಅಗತ್ಯ ವಸ್ತುಗಳ ನಿಯಮಿತ ಪೂರೈಕೆಗೆ

ಇದು ಅಡ್ಡಿಯಾಗುತ್ತಿದೆ. ಆದರೂ, ಕಳೆದ ಕೆಲವು ದಿನಗಳಲ್ಲಿ, ಕಚ್ಚಾ ತೈಲ ಮತ್ತು ಎಲ್‌ಪಿಜಿ ತುಂಬಿದ ಹಡಗುಗಳು ವಿಶ್ವದ ಹಲವು ದೇಶಗಳಿಂದ ಭಾರತಕ್ಕೆ ಬಂದಿವೆ ಎಂದು ಪ್ರಧಾನಿ ವಿವರಿಸಿದರು.

ಧ್ವನಿ: ಪ್ರಧಾನಿ ನರೇಂದ್ರ ಮೋದಿ

ಸುಮಾರು ಒಂದು ಕೋಟಿ ಭಾರತೀಯರು ಗಲ್ಫ್ ರಾಷ್ಟ್ರಗಳಲ್ಲಿ ವಾಸಿಸುತ್ತಿದ್ದು, ಕೆಲಸ ಮಾಡುತ್ತಿದ್ದಾರೆ. ಅವರ ಜೀವನ ಮತ್ತು ಜೀವನೋಪಾಯದ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದು ಭಾರತಕ್ಕೆ ಪ್ರಮುಖ ಕಾಳಜಿಯಾಗಿದೆ ಎಂದು ಪ್ರಧಾನಿ ಹೇಳಿದರು. ಸಂಘರ್ಷದ ಆರಂಭದಿಂದಲೂ, ೩೭೫ ಸಾವಿರಕ್ಕೂ ಹೆಚ್ಚು ಭಾರತೀಯರನ್ನು ರಕ್ಷಿಸಲಾಗಿದೆ. ಇಲ್ಲಿಯವರೆಗೆ ಇರಾನ್‌ನಿಂದ ಸುಮಾರು ಒಂದು ಸಾವಿರ ಭಾರತೀಯರು ಸುರಕ್ಷಿತವಾಗಿ ಭಾರತಕ್ಕೆ ಮರಳಿದ್ದಾರೆ ಎಂದು ಪ್ರಧಾನಿ ಮಾಹಿತಿ ನೀಡಿದರು.

ಆರ್ಥಿಕತೆಯ ಪ್ರತಿ ವಲಯದಲ್ಲೂ ಇತರ ದೇಶಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಸರ್ಕಾರ ನಿರಂತರವಾಗಿ ಪ್ರಯತ್ನಗಳನ್ನು ಮಾಡಿದೆ ಎಂದು ಪ್ರಧಾನಿ ತಿಳಿಸಿದರು. ಭಾರತದಲ್ಲೇ ತಯಾರಿಸಿದ ಹಡಗುಗಳ ನಿರ್ಮಾಣವನ್ನು ಉತ್ತೇಜಿಸಲು ಸರ್ಕಾರ ಸುಮಾರು ೭೦೦ ಶತಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡಿದೆ ಎಂದು ಅವರು ಮಾಹಿತಿ ನೀಡಿದರು.

***************

ರಾಜ್ಯಸಭೆಯು ೨೦೨೬ರ ಧನ ವಿನಿಯೋಗ ಮಸೂದೆಯ ಚರ್ಚೆಯನ್ನು ಪುನರಾರಂಭಿಸಿದೆ. ಇದು ೨೦೨೬-೨೭ ರ ಹಣಕಾಸು ವರ್ಷದ ಸೇವೆಗಳಿಗಾಗಿ ಭಾರತದ ಏಕೀಕೃತ ನಿಧಿಯಿಂದ ಕೆಲವು ಮೊತ್ತಗಳ ಪಾವತಿ ಮತ್ತು ಹಂಚಿಕೆಯನ್ನು ಅಧಿಕೃತಗೊಳಿಸಲು ಇದು ಪ್ರಯತ್ನಿಸುತ್ತದೆ.

ಚರ್ಚೆಯ ನಂತರ, ಮಸೂದೆಯನ್ನು ಲೋಕಸಭೆಗೆ ಹಿಂತಿರುಗಿಸಲಾಗುತ್ತದೆ. ಕೆಳಮನೆ ಕಳೆದ ವಾರ ಶಾಸನವನ್ನು ಅಂಗೀಕರಿಸಿತ್ತು.

ಇಂದು ಚರ್ಚೆಯಲ್ಲಿ ಭಾಗವಹಿಸಿದ ಬಿಜೆಪಿಯ ಡಾ. ದಿನೇಶ್ ಶರ್ಮಾ, ಈ ಶಾಸನವು ಕೇವಲ ಆರ್ಥಿಕ ಪ್ರಕ್ರಿಯೆಯಲ್ಲ, ಆದರೆ ದೇಶದ ಅಭಿವೃದ್ಧಿ ಪ್ರಯಾಣ, ಪಾರದರ್ಶಕತೆ ಮತ್ತು ಹೊಣೆಗಾರಿಕೆಗೆ ನಿರ್ಣಾಯಕ ಅಡಿಪಾಯವಾಗಿದೆ ಎಂದು ಹೇಳಿದರು. ಸರ್ಕಾರವು ಹಣಕಾಸಿನ ಬಲವರ್ಧನೆಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತದೆ ಮತ್ತು ಹಣಕಾಸಿನ ಕೊರತೆಯನ್ನು ಕಡಿಮೆ ಮಾಡಿದೆ ಎಂದು ಅವರು ಹೇಳಿದರು.

ಬಡವರ ಕಲ್ಯಾಣ, ಮೂಲಸೌಕರ್ಯ ಅಭಿವೃದ್ಧಿ ಮತ್ತು ರಾಷ್ಟ್ರ ನಿರ್ಮಾಣಕ್ಕಾಗಿ ಸರ್ಕಾರ ಹಣವನ್ನು ಖರ್ಚು ಮಾಡುತ್ತಿದೆ ಎಂದು ಶರ್ಮಾ ಹೇಳಿದರು.

***************

ಲೋಕಸಭೆಯು ಹಣಕಾಸು ಮಸೂದೆ ೨೦೨೬ರ ಚರ್ಚೆಯನ್ನು ಇಂದು ಪುನರಾರಂಭಿಸಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನಿನ್ನೆ ಸದನದಲ್ಲಿ ಮಂಡಿಸಿದ್ದ ಈ ಮಸೂದೆಯು ೨೦೨೬-೨೦೨೭ ರ ಹಣಕಾಸು ವರ್ಷಕ್ಕೆ ಕೇಂದ್ರ ಸರ್ಕಾರದ ಹಣಕಾಸು ಪ್ರಸ್ತಾವನೆಗಳನ್ನು ಜಾರಿಗೆ ತರಲು ಪ್ರಯತ್ನಿಸುತ್ತದೆ.

ಇಂದು ಚರ್ಚೆಯಲ್ಲಿ ಭಾಗವಹಿಸಿದ ಕಾಂಗ್ರೆಸ್‌ನ ಮನೀಶ್ ತಿವಾರಿ, ಪಶ್ಚಿಮ ಏಷ್ಯಾದ ಸಂಘರ್ಷದಿಂದ ಬದಲಾಗುತ್ತಿರುವ ಜಾಗತಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಬಜೆಟ್ ಇನ್ನೂ ಮಾನ್ಯವಾಗಿದೆಯೇ ಎಂದು ಪ್ರಶ್ನಿಸಿದರು. ಕಳೆದ ತಿಂಗಳು ಹಾಕಲಾದ ಬಜೆಟ್ ಅಂದಾಜುಗಳು ಈಗ ಹಳೆಯದಾಗಿವೆ ಎಂದು ಅವರು ಕೇಳಿದರು.

ಮಸೂದೆ ಅಂಗೀಕಾರವಾದಾಗ ಅದು ರೈತರ ಹೊಲಗಳಲ್ಲಿ ಹಸಿರನ್ನು ತರುತ್ತದೆ, ಯುವಕರಿಗೆ ಉದ್ಯೋಗ ನೀಡುತ್ತದೆ ಮತ್ತು ೧೪೦ ಕೋಟಿ ಭಾರತೀಯರಿಗೆ ಸುರಕ್ಷಿತ ಮತ್ತು ಅಭಿವೃದ್ಧಿ ಹೊಂದಿದ ಭವಿಷ್ಯವನ್ನು ಖಾತರಿಪಡಿಸುತ್ತದೆ ಎಂದು ಬಿಜೆಪಿಯ ನವೀನ್ ಜಿಂದಾಲ್ ಹೇಳಿದರು.

ಜೆಡಿಯುನ ರಾಮಪ್ರೀತ್ ಮಂಡಲ್ ಕೃಷಿ ಕ್ಷೇತ್ರಕ್ಕೆ ಆರು ಪ್ರತಿಶತ ಹೆಚ್ಚಿನ ಬಜೆಟ್ ಹಂಚಿಕೆ ಮಾಡಿದ್ದಕ್ಕಾಗಿ ಸರ್ಕಾರವನ್ನು ಶ್ಲಾಘಿಸಿದರು. ಬಿಹಾರದಲ್ಲಿ ಅಕಾಲಿಕ ಮಳೆ ಮತ್ತು ಆಲಿಕಲ್ಲು ಮಳೆಯಿಂದ ಬೆಳೆ ನಷ್ಟದ ವಿಷಯವನ್ನು ಅವರು ಪ್ರಸ್ತಾಪಿಸಿ ರೈತರಿಗೆ ಪರಿಹಾರವನ್ನು ಕೋರಿದರು.

***************

ಪಶ್ಚಿಮ ಏಷ್ಯಾದ ಪರಿಸ್ಥಿತಿ ಮತ್ತು ಭಾರತದ ರಕ್ಷಣಾ ಸನ್ನದ್ಧತೆಯ ಮೇಲೆ ಅದರ ಪರಿಣಾಮವನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ನವದೆಹಲಿಯಲ್ಲಿಂದು ಅವಲೋಕಿಸಿದರು.

ರಕ್ಷಣಾ ಸಿಬ್ಬಂದಿ ಮುಖ್ಯಸ್ಥರು, ಸೇವಾ ಮುಖ್ಯಸ್ಥರು, ರಕ್ಷಣಾ ಕಾರ್ಯದರ್ಶಿ ಮತ್ತು ಡಿಆರ್‌ಡಿಒ ಅಧ್ಯಕ್ಷರೊಂದಿಗೆ ಸಚಿವ ರಾಜನಾಥ್ ಸಿಂಗ್ ಸಭೆ ನಡೆಸಿದರು.

ಈ ಸಂದರ್ಭದಲ್ಲಿ ಜಾಗತಿಕ ಮತ್ತು ಪ್ರಾದೇಶಿಕ ಭದ್ರತಾ ಸನ್ನಿವೇಶ, ಭಾರತದ ಮೇಲೆ ನಡೆಯುತ್ತಿರುವ ಸಂಘರ್ಷಗಳ ಸಂಭಾವ್ಯ ಉಲ್ಬಣದ ಪರಿಣಾಮ ಹಾಗೂ ಪ್ರಸ್ತುತ ಭೌಗೋಳಿಕ, ರಾಜಕೀಯ ಪರಿಸ್ಥಿತಿಯಿಂದ ಉಂಟಾಗುವ ಸವಾಲುಗಳು ಮತ್ತು ಅವಕಾಶಗಳ ಕುರಿತು ಅಧಿಕಾರಿಗಳು ಸಚಿವರಿಗೆ ವಿವರಿಸಿದರು.

***************

ಈ ವರ್ಷ ೫೨ ವಾರಗಳಲ್ಲಿ ೫೨ ಸುಧಾರಣೆಗಳನ್ನು ಕೈಗೊಳ್ಳುವ ಭಾರತೀಯ ರೈಲ್ವೆಯ ಸಂಕಲ್ಪದ ಭಾಗವಾಗಿ ಐದು ಸುಧಾರಣೆಗಳನ್ನು, ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ನವದೆಹಲಿಯಲ್ಲಿಂದು ಘೋಷಿಸಿದರು. ಟಿಕೆಟ್ ರದ್ದತಿ, ಮರುಪಾವತಿ ನಿಯಮಗಳು, ರೈಲು ಬೋರ್ಡಿಂಗ್ ಬದಲಾವಣೆ, ಆಟೋಮೊಬೈಲ್ ಸಾರಿಗೆ ಮತ್ತು ನಿರ್ಮಾಣದ ಗುಣಮಟ್ಟದಲ್ಲಿ ಸುಧಾರಣೆಗಳನ್ನು ಅವರು ಘೋಷಿಸಿದರು.

ಟಿಕೆಟ್ ರದ್ದತಿ ಮತ್ತು ಮರುಪಾವತಿ ನಿಯಮಗಳಲ್ಲಿನ ಸುಧಾರಣೆಗಳನ್ನು ತೋರಿಸಿದ ಅವರು, ರೈಲು ಹೊರಡುವ ಎಪ್ಪತ್ತೆರಡು ಗಂಟೆಗಳಿಗಿಂತ ಮೊದಲು ರದ್ದಾದ ಟಿಕೆಟ್‌ಗಳಿಗೆ ಪ್ರತಿ ಪ್ರಯಾಣಿಕರಿಗೆ ಕನಿಷ್ಠ ಸ್ಥಿರ ರದ್ದತಿ ಶುಲ್ಕ ಮಾತ್ರ ಅನ್ವಯಿಸುತ್ತದೆ ಎಂದು ತಿಳಿಸಿದರು. ಎಪ್ಪತ್ತೆರಡು ಗಂಟೆಗಳಿಗಿಂತ ಕಡಿಮೆ ಅವಧಿಯಲ್ಲಿ ಮತ್ತು ರೈಲು ಹೊರಡುವ ೨೪ ಗಂಟೆಗಳ ಮೊದಲು ರದ್ದಾದ ಟಿಕೆಟ್‌ಗಳಿಗೆ ಶೇಕಡಾ ೨೫ ರಷ್ಟು ಶುಲ್ಕವನ್ನು ರದ್ದತಿ ಶುಲ್ಕವಾಗಿ ವಿಧಿಸಲಾಗುತ್ತದೆ ಎಂದು ಅವರು ಹೇಳಿದರು.

ನಿಗದಿತ ನಿರ್ಗಮನಕ್ಕೆ ಎಂಟು ಗಂಟೆಗಳಿಗಿಂತ ಕಡಿಮೆ ಮೊದಲು ಟಿಕೆಟ್ ರದ್ದಾದರೆ ಮರುಪಾವತಿಯನ್ನು ಒದಗಿಸಲಾಗುವುದಿಲ್ಲ ಎಂದು ಸಚಿವ ವೈಷ್ಣವ್ ಮಾಹಿತಿ ನೀಡಿದರು. ದೇಶಾದ್ಯಂತ ಯಾವುದೇ ರೈಲ್ವೆ ಕೌಂಟರ್‌ನಲ್ಲಿ ಕೌಂಟರ್ ಟಿಕೆಟ್ ರದ್ದತಿಯನ್ನು ಈಗ ಮಾಡಬಹುದು ಎಂದು ರೈಲ್ವೆ ಸಚಿವಾಲಯ ಘೋಷಿಸಿದೆ.

***************

ಕನ್ನಡಿಗರ ಹೆಮ್ಮೆಯ ಬ್ರ್ಯಾಂಡ್ ಕೆ.ಎಂ.ಎಫ್ ೨೦೨೬ರ ಐಪಿಎಲ್ ಆವೃತ್ತಿಯಲ್ಲಿ ಆರ್‌ಸಿಬಿ ತಂಡಕ್ಕೆ ಪ್ರಾಯೋಕತ್ವ ನೀಡಿದೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕೆ.ಎಂ.ಎಫ್ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ, ಒಟ್ಟು ನಾಲ್ಕು ಕೋಟಿ ರೂಪಾಯಿ ವೆಚ್ಚದಲ್ಲಿ ಕೆ.ಎಂ.ಎಫ್ ಒಂದು ವರ್ಷದ ಟೆಂಡರ್ ಪಡೆದಿದೆ ಎಂದು ತಿಳಿಸಿದ್ದಾರೆ.

ಅತಿ ಹೆಚ್ಚು ಅಭಿಮಾನಿಗಳನ್ನು ಹೊಂದಿರುವ ಆರ್‌ಸಿಬಿ ತಂಡದ ಮೂಲಕ ನಂದಿನಿ ಉತ್ಪನ್ನಗಳು ದೇಶಕ್ಕೆ ಪರಿಚಯವಾಗಲಿವೆ ಎಂದು ಅವರು ಹೇಳಿದ್ದಾರೆ.

ವಿರಾಟ್ ಕೊಹ್ಲಿ, ರಜತ್ ಪಾಟೀದಾರ್, ದೇವದತ್ ಪಡಿಕಲ್ ಕೆಎಂಎಫ್ ಉತ್ಪನ್ನದ ಪ್ರಚಾರ ರಾಯಭಾರಿಗಳಾಗಿ ಆಯ್ಕೆಯಾಗಿದ್ದಾರೆ.

ಕಳೆದ ಋತುವಿನ ವಿಜಯೋತ್ಸವ ವೇಳೆಯಲ್ಲಿ ಉಂಟಾದ ಕಾಲ್ತುಳಿತ ಘಟನೆಯಲ್ಲಿ ಮಡಿದ ೧೧ ಜನರ ಗೌರವಾರ್ಥವಾಗಿ ಕ್ರೀಡಾಂಗಣದ ೧೧ ಆಸನಗಳನ್ನು ಶಾಶ್ವತವಾಗಿ ಕಾಯ್ದಿರಿಸಲು ಕೆಎಸ್‌ಸಿಎ ನಿರ್ಧರಿಸಿದೆ.

***************

ಭಾರತವು ಕ್ಷಯರೋಗ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ನಿರಂತರ ಹೂಡಿಕೆಗಳನ್ನು ಮಾಡಿ, ಪಾಲುದಾರಿಕೆಗಳನ್ನು ಬಲಪಡಿಸಿದೆ ಮತ್ತು ಮೇಡ್-ಇನ್-ಇಂಡಿಯಾ ಟಿಬಿ ರೋಗನಿರ್ಣಯದ ಮಾರ್ಗವನ್ನು ರಚಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಇಂದು ಹೇಳಿದ್ದಾರೆ.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜಗತ್ ಪ್ರಕಾಶ್ ನಡ್ಡಾ ಅವರ ಲೇಖನವನ್ನು ಸಾಮಾಜಿಕ ಮಾಧ್ಯಮದಲ್ಲಿ ಪ್ರಧಾನಿ ಹಂಚಿಕೊಂಡು ಹೀಗೆ ಹೇಳಿದ್ದಾರೆ.

ಸಚಿವ ನಡ್ಡಾ ಅವರು ತಮ್ಮ ಲೇಖನದಲ್ಲಿ ಜನ್ ಭಾಗೀದಾರಿ ವಿಷಯದ ಹಿನ್ನೆಲೆಯಲ್ಲಿ ಟಿಬಿ ನಿರ್ಮೂಲನೆ ಮಾಡುವತ್ತ ದೇಶದ ಪ್ರಯಾಣವನ್ನು ಬಿಂಬಿಸಿದ್ದಾರೆ.

*******ಮುಕ್ತಾಯ*******